International Journal of Kannada Research 2017; 3(3): 72-74

International Journal of Kannada Research
www.kannadajournal.com

ISSN: 2454–5813
IJKR 2017; 3(3): 72-74
© 2017 IJKR
www.kannadajournal.com
Received: 12-05-2017
Accepted: 13-06-2017

**ಸಿದ್ದಪ್ಪ ಝುಳಕಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

**Correspondence**
**ಸಿದ್ದಪ್ಪ ಝುಳಕಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

# ಅಂದು ಅಂಗುಲಿಮಾಲ, ಇಂದು ಬುದ್ಧ ಕರುಣಾಮಾಲ

**ಸಿದ್ದಪ್ಪ ಝುಳಕಿ**

ಅಂಗುಲಿಮಾಲ ಎಂದರೆ ನಮಗೆಲ್ಲಾ ಗೋಚರವಾಗುವುದು 'ಬೆರಳುಗಳ ಮಾಲೆ' ಯನ್ನು ಹೊಂದಿದವನು ಎಂದು ಅರ್ಥ. ಈ ಅಂಗುಲಿಮಾಲನನ್ನು ದೃಷ್ಟಿಯಲ್ಲಿಟ್ಟುಕೊಂಡು ಹಲವು ಕಥೆಗಳು, ನಾಟಕಗಳು ಮತ್ತು ಇತ್ತೀಚೆಗೆ ಅಂಗುಲಿಮಾಲನ ಸಿನಿಮಾ ಕೂಡಾ ಚಿತ್ರಿಕರಿಸುತ್ತಿದ್ದಾರೆ. ನಾವು ಕನ್ನಡ ಸಾಹಿತ್ಯದಲ್ಲಿ ನಾಟಕ ಸಾಹಿತ್ಯವನ್ನು ತೆಗೆದುಕೊಂಡು ನೋಡಿದಾಗ ಡಾ. ಪ್ರಭುಶಂಕರ ರವರು ಬರೆದ 'ಅಂಗುಲಿಮಾಲ' ನಾಟಕ ಮತ್ತು ಸೊಸಲೆ ಗಂಗಾಧರ ಅವರು ಬರೆದ "ಬುದ್ಧನಡೆ" ನಾಟಕದಲ್ಲಿ ಅಂಗುಲಿಮಾಲನ ಸನ್ನಿವೇಶ ಬಹಳಷ್ಟು ಅವಿನಾಭಾವ ಸಂಬಂಧ ಹೊಂದಿದೆ ಎಂದು ಹೇಳಬಹುದು.

ಹೇಗೆಂದರೆ ಡಾ. ಪ್ರಭುಶಂಕರ ಅವರು ಒಬ್ಬ ಸಾಮಾನ್ಯವ್ಯಕ್ತಿ ರಾಕ್ಷಸ ಪ್ರವೃತ್ತಿಗೆ ಬರಲು ಹಲವು ಕಾರಣಗಳನ್ನು ಕಾರಣಿಭೂತವಾಗಿರುತ್ತವೆ. ಅವನ್ನು ಎತ್ತಿತೋರಿಸದೆ ಕೇವಲ ಅಂಗುಲಿಮಾಲ ಎನ್ನುವ ರಾಕ್ಷಸನನ್ನು " ಬುದ್ಧ" ಸಂದರ್ಶಿಸಿ, ಹಿಂಸಾನಿರತನಾದ ವ್ಯಕ್ತಿಯನ್ನು ಅಹಿಂಸಾ ವ್ಯಕ್ತಿಯನ್ನು ನೀಡಿದ ಸಂದೇಶ ಅವರ ನಾಟಕದಲ್ಲಿದೆ. ಅಹಿಂಸೆಯ ಪ್ರವರ್ತಕನಾದ ಬುದ್ಧನ ಮಾತಿನಿಂದ ಎಂತಹ ವ್ಯಕ್ತಿಯಾದರೂ ಸನ್ಮಾರ್ಗದಲ್ಲಿ ನಡೆಯುತ್ತಾನೆ ಎಂಬುದು ಡಾ. ಪ್ರಭುಶಂಕರ ಅವರ ಅಂಗುಲಿಮಾಲ ನಾಟಕದಿಂದ ತಿಳಿದುಬರುತ್ತದೆ. ದುಷ್ಟ, ಕೊಲೆಗಡುಕನಾಗಿರುವ ಅಂಗುಲಿಮಾಲನು ಬುದ್ಧನ ಉಪದೇಶದ ಮೂಲಕ ಹೇಗೆ ಉದ್ದಾರನಾದ ಮತ್ತು ಅಹಿಂಸಾನಿರತನಾಗಿ ಬೌದ್ಧಧರ್ಮದ ಭಿಕ್ಷುವಾಗಿ ತನ್ನ ಮನವನ್ನು ಪರಿವರ್ತನೆಗೊಂಡನು ಎಂಬುದು ತಿಳಿಸುತ್ತದೆ.

ಆದರೆ ಸೊಸಲೆ ಗಂಗಾಧರ ಅವರ "ಬುದ್ಧನೆಡೆ" ನಾಟಕದಲ್ಲಿ ಅಂಗುಲಿಮಾಲನ ಸನ್ನಿವೇಶ ನೋಡಿದಾಗ ಡಾ. ಪ್ರಭುಶಂಕರ ಅವರಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ, ಅಂಗುಲಿಮಾಲನ ದುಶ್ಕೃತ್ಯಕ್ಕೆ ಕಾರಣವೆನೆಂಬುದನ್ನು ಕಂಡು ಹಿಡಿದಿದ್ದಾರೆ. ಒಬ್ಬ ಸಾಮಾನ್ಯವಾದ ವ್ಯಕ್ತಿ ದುಷ್ಟ, ಕೊಲೆಗಾರ ಅಂಗುಲಿಮಾಲನಾಗಿ ಹೇಗೆ ಪರಿವರ್ತನೆಗೊಂಡನೆಂಬುದು ಬಹಳ ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಾರೆ. ನಿಜವಾಗಿಯೂ ನೋಡಿದರೆ ಮೊದಲು ಯಾವ ವ್ಯಕ್ತಿಯೂ ಕೂಡಾ ದುಷ್ಟನಾಗಿರುವುದಿಲ್ಲ. ಆದರೆ ಅವನಿಗೆ ಒದಗಿರುವ ಸಮಸ್ಯೆಗಳು ಅಥವಾ ಸನ್ನಿವೇಶಗಳು ದುಷ್ಟನನ್ನಾಗಿ ಮಾಡುತ್ತವೆ.

ಅಂಗುಲಿಮಾಲನು ಮೊದಲು ಸಾಮಾನ್ಯ ವ್ಯಕ್ತಿಯಾಗಿದ್ದ ಆದರೆ ಅವನಿಗೆ ಒದಗಿರುವ ಸನ್ನಿವೇಶ ಬಹಳಷ್ಟು ಮನಕಲುಕುವಂತದ್ದಾಗಿತ್ತು. ಇವತ್ತಿನ ಆಧುನಿಕ ಸಂದರ್ಭದಲ್ಲಿ ಅನ್ಯಾಯ, ಅತ್ಯಾಚಾರ ತುಂಬಿ ತುಳುಕುತ್ತಿದೆ. ಇವತ್ತಿನ ಜನ ಬುದ್ದಿವಂತರು, ಜ್ಞಾನವಂತರಾಗಿದ್ದರೂ ಇಂತಹ ಘಟನೆಗಳು ನಡೆಯುತ್ತಿವೆ. ಕ್ರಿ.ಪೂ. ದಲ್ಲಿ ಬುದ್ಧನ ಕಾಲದ ಸಂದರ್ಭದಲ್ಲಿ ಅಜ್ಞಾನ, ಅಂಧಕಾರ ತುಂಬಿ ತುಳುಕುತಿತ್ತು. ಆದ್ದರಿಂದಲೇ ಬುದ್ಧ ಅರಮನೆ ತೊರೆದು, ಜ್ಞಾನ ಪಡೆಯುವುದರ ಸಲುವಾಗಿ ಸಿದ್ಧಾರ್ಥ ಬುದ್ಧನಾದ. ಸೊಸಲೆ ಗಂಗಾಧರ ಅವರ ಬುದ್ಧನೆಡೆ ನಾಟಕದ ಸನ್ನಿವೇಶ ನೋಡಿದಾಗ ಯಾವುದೇ ವ್ಯಕ್ತಿಗೂ ಕೂಡಾ ಸಿಟ್ಟು, ಅನ್ಯಾಯದ ವಿರುದ್ಧ ಪ್ರತಿಭಟನೆ ಪ್ರವೃತ್ತಿಗೆ ತರುತ್ತದೆ. ಒಂದು ಘಟನೆ "ಮೈನೆರೆದ ಅಂಗುಲಿಮಾಲನ ತಂಗಿಗೆ ಮೈನೆರೆದ ಶಾಸ್ತ್ರ ನಡೆಯುತ್ತಿರುತ್ತದೆ ಅಲ್ಲಿಗೆ ಬಂದ ಆರುವರು ಆತನ ಮನೆಗೆ ಬರುವರು. ಉಡುಗೊರೆ ನೀಡುವರು, ಅಂಗುಲಿಮಾಲ ಆಗ ಅಲ್ಲಿರಲಿಲ್ಲ. ಆತನ ತಂದೆ ತಾಯಿಯನ್ನು ಕಟ್ಟಿಹಾಕಿ, ಆ ಎಳೆಯ ಹೂವಿನಮೇಲೆ ಅತ್ಯಾಚಾರ ಮಾಡಿದರು. ಆರುವವರನ್ನು ಅಟ್ಟಾಡಿಸಿಕೊಂಡು ಕೊಂದನು. ನಂತರ ಇದರಿಂದ ಅಂಗುಲಿಮಾಲನು ರೊಚ್ಚಿಗೆದ್ದು ತನ್ನ ತಂಗಿಯ ಮೈ ಮುಟ್ಟಿದವರ ಕೈ ಬೆರಳುಗಳನ್ನು ಕತ್ತರಿಸಿ ಕೊರಳಿಗೆ ಮಾಲೆ ಧರಿಸಿಕೊಂಡನು".(ಗಂಗಾಧರ ಸೊಸಲೆ, ಬುದ್ಧನೆಡೆ ಪು.ಸಂ. 160) ಹೀಗೆ ಒಬ್ಬ ವ್ಯಕ್ತಿ ಅಂಗುಲಿಮಾಲನಾಗಲು ಈ ಘಟನೆ ಪ್ರೇರಣೆಯಾಗಿರಬೇಕು ಮತ್ತು ರೊಚ್ಚಿಗೇಳಲು ಕಾರಣವಾಗಿರಬೇಕು. ಯಾವುದೇ ಒಬ್ಬ ವ್ಯಕ್ತಿ ಕಠೋರನಾಗಲು ಹಲವು ಕಾರಣವಿರುತ್ತವೆ. ಇಷ್ಟಕ್ಕೆ ಅಂಗುಲಿಮಾಲನ ಈ ಕೃತ್ಯದಿಂದ ರೊಚ್ಚಿಗೆದ್ದ ಆರುವರು ಅವನ ತಂದೆ ತಾಯಿಯನ್ನು ಕೊಂದು

ಅವನ ಮನೆಯನ್ನು ಸುಟ್ಟು ಭಸ್ಮ ಮಾಡಿದರು ಇಷ್ಟಾದರೂ ಅಂಗುಲಿಮಾಲ ಬಗ್ಗಲಿಲ್ಲ. ಊರ ಭುಮಾಲಿಕರ ದೌರ್ಜನ್ಯಕ್ಕೆ ಹೆದರಿ ಕಾಡು ಸೇರಿಕೊಳ್ಳುತ್ತಾನೆ. ಊರನ್ನು ಬಿಟ್ಟು ಕಾಡನ್ನು ಸೇರಿಕೊಂಡು ತಮ್ಮ ಮನೆತನಕ್ಕೆ ಹಿಂಸೆ ಕೊಟ್ಟವರನ್ನು ಸಿಕ್ಕಿದವರನ್ನು ಕೊಂದು ಅವರ ಕೈ ಬೆರಳುಗಳನ್ನು ಕತ್ತರಿಸಿ ಕೊರಳಿಗೆ ಮಾಲೆಯನ್ನು ಹಾಕಿಕೊಳ್ಳತೊಡಗಿದನು. ಹೀಗೆ ಅಂಗುಲಿಮಾಲ ದಿನದಿಂದ ದಿನಕ್ಕೆ ಮಹಾ ಕ್ರೂರಿಯೇ ಆಗಿಬಿಟ್ಟ. ಆತನು ಮುಂದೆ ರಾಕ್ಷಸನಾಗಿ ಬಿಟ್ಟ ಎನ್ನಲಾಗುತ್ತದೆ.

ಭಾರತ ದೇಶದ ಮೂಲ ಜನಾಂಗ ದ್ರಾವಿಡ ಆದರೆ ಆರ್ಯರು ಮಧ್ಯ ಏಷ್ಯಾದಿಂದ ಬಂದರೆಂದು ಇತಿಹಾಸದಿಂದ ತಿಳಿಯುತ್ತದೆ. ಪುರಾಣದಲ್ಲಿ ಶಂಭುಕನ ಬಗ್ಗೆ ವಿವರಿಸಲಾಗಿದೆ. ಶಂಭುಕ ಮಹಾತಪಸ್ವಿ ರಾವಣನ ತಂಗಿಯಾದ ಶೂರ್ಪನಕಿಯ ಮಗ. ಶಂಭುಕನು ಮಹಾತಪಸ್ವಿ ಮತ್ತು ಮಹಾಜ್ಞಾನಿಯಾಗಿದ್ದ. ಆರ್ಯರು "ಶಂಭುಕರಂತಹವರನ್ನು ಅನ್ಯಾಯವಾಗಿ ಕೊಂದು ಧರ್ಮ ರಕ್ಷಣೆಗೆ, ಲೋಕ ಕಲ್ಯಾಣಕ್ಕೆ ಎಂಬ ಗುರಾಣಿಯನ್ನು ಮುಂದಿಟ್ಟುಕೊಂಡು ವಂಚಿಸುತ್ತಿರುವ ಆರ್ಯರು ಲೋಕಪಾಲಕರು ! ಅಂದ ಹಾಗೇ ಈಗಲಾದರು ಪ್ರಜ್ಞಾವಂತರೆಲ್ಲರು ರಾಕ್ಷಸರ ನಿಜ ಚರಿತ್ರೆಯನ್ನು ಜಗತ್ತಿಗೆ ಹೇಳಿ" (ವಿಜಯಾ ಮಹೇಶ, ಮೂಲನಿವಾಸಿ ಬಹುಜನರ ಇತಿಹಾಸ, ಪು.ಸಂ.15) ಅನ್ನುತ್ತಾರೆ.

ಹೀಗೆ ಅಂಗುಲಿಮಾಲನನ್ನು ಒಳ್ಳೆಯ ಮನುಷ್ಯನನ್ನಾಗಿ ಮಾಡಲು ಸ್ವತಃ ಬುದ್ಧನೇ ಅಂಗುಲಿಮಾಲನಿರುವ ಕಾಡಿಗೆ ಹೋಗುತ್ತಾನೆ. ಆಗ ಇವರಿಬ್ಬರ ಮಧ್ಯೆ ಸಂಭಾಷಣೆ ನಡೆದು ತಾನು ಹೀಗೆ ಆಗಲು ತನ್ನ ಕುತ್ತಿಗೆಯಲ್ಲಿ ಬೆರಳುಗಳೆಲ್ಲ ತನ್ನ ತಂಗಿಯನ್ನು ಅತ್ಯಾಚಾರ ಮಾಡಿದವರ ಬೆರಳುಗಳು. ನನ್ನ ತಂದೆ ತಾಯಿಯನ್ನು ಮತ್ತು ನನ್ನು ಮನೆಯನ್ನು ಸುಟ್ಟು ಭಸ್ಮ ಮಾಡಿದವರ, ನನ್ನ ಬದುಕನ್ನೆ ಹಾಳು ಮಾಡಿದವರ ಬೆರಳುಗಳು ಎಂದು ಅಂಗುಲಿಮಾಲನು ತನ್ನ ವೆಥೆಯನ್ನು ಬುದ್ಧನಲ್ಲಿ ತೊಡಿಕೊಳ್ಳುತ್ತಾನೆ.

ದ್ವೇಶವನ್ನು ದ್ವೇಶದಿಂದ ಗೆಲ್ಲಲು ಸಾಧ್ಯವಿಲ್ಲ ಅದಕ್ಕೆ ಶಾಸ್ವತ ಪರಿಹಾರ ಕಂಡುಕೊಳ್ಳಬೇಕು. ಅದು ಸೇಡಿನ ಮೂಲಕ ಅಲ್ಲ ಎಂದು ಬುದ್ಧ ಹೇಳಿದಾಗ ಅಂಗುಲಿಮಾಲನು ಅವರ ತಪ್ಪಿಗೆ ಶಿಕ್ಷೆ ಆಗಲೇಬೇಕು ಎನ್ನುತ್ತಾನೆ. "ಸೇಡು ! ನನ್ನ ತಂಗಿಯನ್ನೂ, ನನ್ನ ಕುಟುಂಬದವರನ್ನು ಸರ್ವನಾಶ ಮಾಡಿದವರ ಮೇಲಿರುವ ಸೇಡು ! ಹೆಣ್ಣಿನ ಮೇಲೆ ಅತ್ಯಾಚಾರ ಮಾಡಿದವರು ಯಾರೆ ಆದರು ಸರಿಯೇ ಅವರನ್ನು ಕೊಂದು ಬಿಡುವೇನು".(ಬುದ್ಧನೆಡೆ, ಗಂಗಾಧರ ಸೊಸಲೆ ಪು.ಸಂ167) ಎಂದಾಗ ನಮಗೆ ಇತ್ತೀಚ್ಚೆಗೆ ನಡೆದ ದೆಹಲಿ ಅತ್ಯಾಚಾರ ಪ್ರಕರಣ ಹಾಗೂ ದಿನನಿತ್ಯ ನಡೆಯುತ್ತಿರುವ ಹಸುಗೂಸುಗಳ ಮೇಲಿನ ಅತ್ಯಾಚಾರ ಪ್ರಕರಣಗಳು ನಮ್ಮ ಕಣ್ಣ ಮುಂದೆ ಕಟ್ಟುತ್ತವೆ. ಆಗ ಬುದ್ಧನು ಅವನನ್ನು ಆ ಕ್ರೂರತನದಿಂದ ಹೊರಬರುವಂತೆ ಮಾಡುತ್ತಾನೆ. ಸೇಡಿಗೆ ಪ್ರತಿಸೇಡು ಈ ಕೊಲೆ ಮಾಡುವುದು ಅಲ್ಲ ಎಂದು ಹೇಳಿ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುತಾನೆ. ಬುದ್ಧನ ಭೋಧನೆಯಿಂದ ಅಂಗುಲಿಮಾಲನು ತನ್ನ ಕೈಯಲ್ಲಿರುವ ಉದ್ದನೆಯ ಕತ್ತಿ(ಖಡ್ಗ) ಬೀಸಾಕಿ ಬುದ್ಧನ ಕಾಲುಗಳನ್ನು ತಬ್ಬಿಕೊಂಡು ಅಳುತ್ತಾನೆ. ಬುದ್ಧನು ಆತನನ್ನು ಮೇಲೆತ್ತಿಕೊಂಡು ಕಣ್ಣಿರನ್ನು ಒರೆಸುತ್ತಾ, ತನ್ನೆದೆಗೆ ತಬ್ಬಿಕೊಳ್ಳುತ್ತಾನೆ. ಆಗ ಅಂಗುಲಿಮಾನು ತನ್ನ ಕೊರಳಲಿದ್ದ ಬೆರಳ ಮಾಲೆಯನ್ನು ಕಿತ್ತು ಬಿಸಾಕುತ್ತಾನೆ. ಸಂಬುದ್ದನಿಗೆ ಶರಣಾಗಿ ಹೋಗುತ್ತಾನೆ. 'ಅಂದು ಅಂಗುಲಿಮಾಲ ಇಂದು ಬುದ್ದ ಕರುಣಾಮಾಲ'ನಾಗಿ ಪರಿವರ್ತನಾಗಿ ಬೌದ್ಧ ಭಿಕ್ಕುವಾಗುತ್ತಾನೆ.

ಅಂಗುಲಿಮಾಲನು ಬುದ್ಧನ ಅನುಗ್ರಹದಿಂದ ಕಾಡಿನಿಂದ ಹೊರಬಂದು ಮತ್ತೆ ಊರು ಸೇರಿಕೊಂಡಿದ್ದು ಬುದ್ದನೊಂದಿಗೆ. ಒಂದು ದಿನ ಅಂಗುಲಿಮಾಲನು ಊರಿನಲ್ಲಿ ಭಿಕ್ಷೆಗೆ ಹೋಗುತ್ತಾನೆ, ಅಂದೇ ಅಲ್ಲಿನ ಕ್ರೂರಜನರು ಕಲ್ಲಿನಿಂದ ಹೊಡೆಯುತ್ತಾರೆ ಆಗ ಅಂಗುಲಿಮಾಲನು ರಕ್ತವನ್ನು ಸುರಿಸುತ್ತ ಸಾವಿನ ಅಂಚಿನಲ್ಲಿ ಬುದ್ದನಲ್ಲಿಗೆ ಬರುತ್ತಾನೆ. ಬುದ್ಧನು ಆತನ ರಕ್ತಮಯವಾದ ದೇಹವನ್ನು ಕಂಡು

> "ಪೇಳ್ ಕಂದ, ಪುಣ್ಯಾಕ್ಷ, ಏತಕೀಪರಿಯಾಯ್ತು?
> ಹಗೆಯು ಹೊಗೆಯಾಡಿತೇ? ಜನ ನಿನ್ನ ಹೊಡೆದರೇ?
> ಪುಣ್ಯಾಕ್ಷ, ಒಂದೇ ಕಣ್ಣ್ ನೋಡುತ್ತಿದೆ.
> ಮತ್ತೊಂದಕೇನಾಯ್ತು ?"

(ಡಾ.ಪ್ರಭುಶಂಕರ ಬುದ್ದನಾಟಕ ಚಕ್ರ –ಅಂಗುಲಿಮಾಲ ಪು.ಸಂ.59) ಅನ್ನುತ್ತಾ ಅಂಗುಲಿಮಾಲನಿಗೆ ಮದ್ದನ್ನು ಗಾಯದ ಮೇಲೆ ಹಚ್ಚುತ್ತಾನೆ. ಜನರು ಅನ್ಯಾಯವಾಗಿ ಅಂಗುಲಿಮಾಲನಿಗೆ ಹೊಡೆಯುತ್ತಾರೆ. ಆಗ ಅಂಗುಲಿಮಾಲನು ಬುದ್ದನಿಗೆ ಏನೆಂದು ಹೇಳಲಿ ತಂದೆ ಜನರು ಬಡಿದರು ಎನ್ನಲೇ ಅದು ಸುಳ್ಳು. ನಾನು ಹಿಂದೆ ಜನರಿಗೆ ಕೊಟ್ಟ ಕಷ್ಟ ಇಂದು ಕಾಣಿಕೆ ರೂಪದಲ್ಲಿ ಹಿಂದಿರುಗಿ ನೀಡಿದ್ದಾರೆ. ಅದು ಒಳಿತೆಂದು ಸ್ವೀಕರಿಸಿ ಬಂದಿದ್ದೇನೆ. ಎನ್ನುವ ಅಂಗುಲಿಮಾಲನ ಮಾತಿನಲ್ಲಿ ತನ್ನ ತಾನು ಆತ್ಮಾವಲೋಕನ ಮಾಡಿಕೊಳ್ಳುವ ಪ್ರಸಂಗವನ್ನು ಅಂಗುಲಿಮಾಲ ಎಂಬ ನಾಟಕದಲ್ಲಿ ಕಂಡು ಬರುತ್ತದೆ.

ಹೀಗೆ ಅಂಗುಲಿಮಾಲನಿಗೆ ಜನರು ಅನ್ಯಾಯವಾಗಿ ಕಲ್ಲಿನಿಂದ ಹೊಡೆದು ಕೊಲ್ಲುತ್ತಾರೆ. ಇಂದಿನ ದಿನಗಳಲ್ಲಿ ನಡೆಯುತ್ತಿರುವ ಅತ್ಯಾಚಾರ ಪ್ರಕರಣಗಳಿಗೆ ಕೊನೆ ಹಾಡಬೇಕಾಗಿದೆ. ಜನರಿಗೆ ಮಾನವಿಯ ಮೌಲ್ಯಗಳ ಬಗ್ಗೆ ಗೊತ್ತಾಗಬೇಕಾಗಿದೆ. ಅನಾಗರಿಕರಂತೆ ವರ್ತಿಸುವ ಜನಕ್ಕೆ ಅಂಗುಲಿಮಾಲ ಮತ್ತು ಬುದ್ದನ ಕರುಣಾ ಸಂದೇಶವನ್ನು ನೀಡಬೇಕಾಗಿದೆ. ಹಾಗೇ ಅಂಗುಲಿಮಾಲ ನಿಜವಾಗಿಯೂ ಕ್ರೂರಿಯಲ್ಲ. ಆತನನ್ನು ಕ್ರೂರಿಯನ್ನಾಗಿ ಮಾಡಿದ ಭೂಮಾಲಿಕ ವರ್ಗ ಅಥವಾ ಆರ್ಯರು ಎಂದು ಹೇಳಬಹುದು. ಆತನ ರೋಷ, ದ್ವೇಶ, ಹಗೆತನ ಸಾಮಾನ್ಯ ಜನರ ಮೇಲಿರಲಿಲ್ಲ. ಅದು ತನ್ನ ಮನೆತನದವರ ಮೇಲೆ ಅನ್ಯಾಯ ಅತ್ಯಾಚಾರ ಮಾಡಿದವರ ಮೇಲಾಗಿತ್ತು. ಇಂದು ನಾವು ನಿಜವಾದ ಇತಿಹಾಸ ಅರಿಯುವುದು ಮುಖ್ಯವಾಗಿರುವುದು. ನಾವು ಇವತ್ತು ಪುರಾಣ, ಕತೆಗಳನ್ನು ನಂಬಿದ್ದೇವೆ. ನೈಜ್ಯವಾಗಿರುವ ಇಂತಹ ಮಾನವಿಯ ಕತೆಗಳನ್ನು ನಂಬುವುದು ಉತ್ತಮ.

ಒಟ್ಟಿನಲ್ಲಿ ಗಂಗಾಧರ ಸೊಸಲೆರವರ ಬುದ್ಧನೆಡೆ ನಾಟಕ ಮತ್ತು ಡಾ. ಪ್ರಭುಶಂಕರ ರವರ ಅಂಗುಲಿಮಾಲ ನಾಟಕಗಳು ಒಂದಕ್ಕೊಂದು ಸಂಬಂಧ ಹೊಂದಿ ನೈಜ್ಯ ಘಟನೆಗಳನ್ನು ಬುದ್ಧನ ಸಂದೇಶಗಳ ಮೂಲಕ ಸಹೃದಯರ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಇತಿಹಾಸವನ್ನು ತಿರುಚಿ ಬರೆದಿರುವ ಮನುವಾದಿಗಳ ಇತಿಹಾಸವನ್ನೇ ಓದುತ್ತಾ ಬಂದಿರುವ ನಾವುಗಳು ಇನ್ನು ಮುಂದಾದರೂ ಮಾನವೀಯ ಮೌಲ್ಯ, ಅಹಿಂಸೆ, ಕರುಣೆ, ಸಹೊದರತೆಯಿಂದ ಕೂಡಿರುವ ನೈಜ್ಯ ಇತಿಹಾಸವನ್ನು ಓದುವುದರ ಜೊತೆ ಜೊತೆಯಲ್ಲಿ ಬಹುಜನರ ನಿಜವಾದ ಇತಿಹಾಸವನ್ನು ಅರಿತು ಪ್ರಚಾರ ಮಾಡುವಲ್ಲಿ ನಮ್ಮಂತ ಯುವ ಪಿಳಿಗೆಯವ ಪಾತ್ರ ಬಹುಮುಖ್ಯವಾಗಿದೆ ಎಂದು ಹೇಳಬಹುದಾಗಿದೆ.

**ಆಕರ ಸೂಚಿ**

1. ಮೂಲನಿವಾಸಿ ಬಹುಜನರ ಇತಿಹಾಸ – ವಿಜಯಾ ಮಹೇಶ, ಪ್ರಬುದ್ಧ ಪ್ರಕಾಶನ, ಚಾಮರಾಜನಗರ
2. ಬುದ್ಧನಾಟಕ ಚಕ್ರ (ಅಂಗುಲಿಮಾಲ) ಡಾ. ಪ್ರಭುಶಂಕರ,

ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು
3. ಬುದ್ಧನೆಡೆ (ಕಾವ್ಯನಾಟಕ) ಸೊಸಲೆ ಗಂಗಾಧರ –ಮಣಿ ಪ್ರಕಾಶನ, ಬೆಂಗಳೂರು
4. ದಲಿತ ಚಳುವಳಿ ಮತ್ತು ಸಾಹಿತ್ಯ – ಡಾ. ವಿ.ಮುನಿವೆಂಕಟಪ್ಪ, ತನುಮನ ಪ್ರಕಾಶನ, ಮೈಸೂರು.